# <u>ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)</u>

ನಂ.ನಸಶಿ/ಕಾವಿ/ವಿವ–28/ದರವಾರು/2009–10 ದಿ: 09–10–2009.

## <u>ಅಲ್ಪಾವಧಿ ದರವಾರು ಪ್ರಕಟಣೆ</u>

ಈ ಮೂಲಕ ಜಲ ವಿಹಾರ ಕಾರ್ಯದಲ್ಲಿ ಅನುಭವವಿರುವ ಗುತ್ತಿಗೆದಾರರು/ಏಜನ್ಸಿಯವರಿಂದ 3 ವರ್ಷಗಳ ಅವಧಿಗೆ ಕೋಟೆಕೆರೆಯಲ್ಲಿ ಬೋಟಿಂಗ್ ಹಾಗೂ ಕೆರೆಯ ನಿರ್ವಹಣೆಯನ್ನು ಮಾಡಲು ದರವಾರನ್ನು ಆಹ್ವಾನಿಸಲಾಗಿದೆ. ಆಸಕ್ತಿ ಇರುವ ಗುತ್ತಿಗೆದಾರರು/ಏಜನ್ಸಿಯವರು ತಮ್ಮ ದರವಾರನ್ನು ದಿ: 22–10–2009 ಅಪರಹ್ನಾ 4:30 ಘಂಟೆಗೆ ಇ.ಎಮ್.ಡಿ. ಪೌರಾಯುಕ್ತರು, ನಗರಸಭೆ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆಗೆದ ಡಿ.ಡಿ. ಯೊಂದಿಗೆ ಷರತ್ತಿನಲ್ಲಿ ವಿವರಿಸಿದ ದಾಖಲೆಗಳೊಂದಿಗೆ ಸಲ್ಲಿಸುವುದು. ಅವಧಿ ಮಿರಿ ಬಂದ ದರವಾರುಗಳನ್ನು ಸ್ವೀಕರಿಸಲಾಗುವುದಿಲ್ಲ. ದರವಾರನ್ನು ಅದೇ ದಿನ 5:00 ಘಂಟೆಗೆ ಉಪಸ್ಥಿತರಿರುವ ಗುತ್ತಿಗೆದಾರರ ಸಮಕ್ಷಮ ನಗರಸಭಾ ಕಛೇರಿಯಲ್ಲಿ ತೆರೆಯಲಾಗುವುದು.

| **ವಿವರ** | **ಇ.ಎಮ್.ಡಿ. ರಕಂ** | **ಗುತ್ತಿಗೆ ಅವಧಿ** | **ಭದ್ರತಾ ಠೇವಣಿ** | **ಮಾಸಿಕ ಲೈಸನ್ಸ್ ಶುಲ್ಕ** (ಗುತ್ತಿಗೆದಾರರು ನಮೂದಿಸುವ ದರ ರೂ. ಗಳಲ್ಲಿ) |
|---|---|---|---|---|
| ಕೋಟೆಕೆರೆಯಲ್ಲಿ ಬೋಟಿಂಗ್ ಹಾಗೂ ಕೆರೆಯ ನಿರ್ವಹಣೆಯನ್ನು ಮಾಡುವುದು. | 10,000–00 | 3 ವರ್ಷಗಳು | 50,000–00 | |

**<u>ಷರತ್ತುಗಳು</u>**

1) ದರವಾರಿನಲ್ಲಿ ಭಾಗವಹಿಸುವ ಗುತ್ತಿಗೆದಾರರು ತಮ್ಮ ಬಳಿ ಇರುವ ಸುರಕ್ಷತಾ ಸಾಮಗ್ರಿ ಸಿಬ್ಬಂದಿಗಳ ವಿವರ ಹಾಗೂ ಜಲಕ್ರಿಡೆ ಡ್ರೈವಿಂಗ ತರಬೇತಿ ಪಡೇದ ಕುರಿತು ಮಾಹಿತಿ ಹಾಗೂ ಬೋಟಿಂಗ ನಡೆಸಲು ಇರುವ ಸಾಮಾಗ್ರಿಗಳ ಸಮಗ್ರ ಮಾಹಿತಿಯನ್ನು ದರವಾರಿನ ಜೊತೆ ಲಗತ್ತಿಸುವದು.

2) ಇ.ಎಮ್.ಡಿ. ರಕಂ ಡಿ.ಡಿ. ಯನ್ನು ರಾಷ್ಟ್ರೀಕೃತ ಬ್ಯಾಂಕನಿಂದ ಪೌರಾಯುಕ್ತರ ಪದನಾಮಕ್ಕೆ ತೆಗೆದು ದರವಾರು ಜೊತೆಗೆ ಲಗತ್ತಿಸಬೇಕು.

3) ಜಲವಿಹಾರ ವೇಳೆಗೆ ಜಲವಿಹಾರಕ್ಕೆ ಭಾಗವಹಿಸುವ ಗ್ರಾಹಕ ನಾಗರೀಕರ ಸಂಪೂರ್ಣ ಸುರಕ್ಷಿತತೆ ಜವಾಬ್ದಾರಿ ಗುತ್ತಿಗೆದಾರ/ಗುತ್ತಿಗೆ ಸಂಸ್ಥೆಯದ್ದೆ ಇರುತ್ತದೆ.

4) ನಗರಸಭೆಯಿಂದ ನಿಗದಿಪಡಿಸಿದ ಮಾಸಿಕ ಲೈಸನ್ಸ್ ಶುಲ್ಕ ರೂ. 5,000/–ಕ್ಕಿಂತ ಕಡಿಮೆ ದರ ನಮೂದಿಸಿದ್ದಲ್ಲಿ ದರವನ್ನು ಒಪ್ಪಲಾಗುವುದಿಲ್ಲ.

5) ಟೆಂಡರನ್ನು ಸ್ವೀಕರಿಸುವ ಯಾ ತಿರಸ್ಕರಿಸುವ ಅಧಿಕಾರ ನಗರಸಭೆಯದ್ದಾಗಿರುತ್ತದೆ.

ಅಧ್ಯಕ್ಷರು
ನಗರಸಭೆ, ಶಿರಸಿ

ಪೌರಾಯುಕ್ತರು,
ನಗರಸಭೆ, ಶಿರಸಿ